# ರಂಗದರ್ಶನ: ವೃತ್ತಿ ರಂಗಭೂಮಿ ಅಧ್ಯಯನದ ತಾತ್ವಿಕ ನೆಲೆಗಳು

**ಹೇಮಲತಾ ಜಿ.ಎಂ.***

**DOI: https://doi.org/10.5281/zenodo.22107153**

**ABSTRACT**

ಕನ್ನಡ ವೃತ್ತಿರಂಗಭೂಮಿಯ ಇತಿಹಾಸವನ್ನು ಗಮನಿಸಿದಾಗ, ಅದರ ಅಧ್ಯಯನವು ಕೇವಲ ಕಲಾತ್ಮಕತೆಯಷ್ಟೇ ಅಲ್ಲದೆ ಬಹುಮುಖಿ ದೃಷ್ಟಿಕೋನಗಳನ್ನು ಒಳಗೊಂಡಿರುವುದು ತಿಳಿಯುತ್ತದೆ. ಆರಂಭದಲ್ಲಿ ಮನರಂಜನೆಯಾಗಿದ್ದ ಇದು, ವಸಾಹತುಶಾಹಿ ಕಾಲದಲ್ಲಿ ಮರಾಠಿ ನಾಟಕಗಳ ಎದುರು ಕನ್ನಡದ ಅಸ್ತಿತ್ವ ಮತ್ತು ಭಾಷಾಭಿಮಾನವನ್ನು ರಕ್ಷಿಸಿದ ಸಾಂಸ್ಕೃತಿಕ ಪ್ರತಿರೋಧದ ಸಂಕೇತವಾಗಿ ಬೆಳೆಯಿತು. ಅಲ್ಲದೆ, ಇತಿಹಾಸ ಮತ್ತು ಪುರಾಣಗಳ ಮರುಸೃಷ್ಟಿಯ ಮೂಲಕ ರಾಷ್ಟ್ರೀಯ ಪ್ರಜ್ಞೆಯನ್ನು ಜಾಗೃತಗೊಳಿಸಿತು. ಸಾಮಾಜಿಕವಾಗಿ ವರ್ಣ-ವರ್ಗ ಸಂಘರ್ಷ, ಲಿಂಗ ತಾರತಮ್ಯ ಮತ್ತು ಅಸ್ಪೃಶ್ಯತೆಯಂತಹ ಸಮಸ್ಯೆಗಳನ್ನು ರಂಗದ ಮೇಲೆ ತಂದು ವೈಚಾರಿಕ ಚರ್ಚೆಗೆ ದಾರಿ ಮಾಡಿಕೊಟ್ಟಿತು. ಆರ್ಥಿಕ ಸವಾಲುಗಳ ನಡುವೆಯೂ ಸ್ವಾವಲಂಬನೆ ಕಾಯ್ದುಕೊಂಡು, ತಿರುಗು ರಂಗಸಜ್ಜಿಕೆ ಹಾಗೂ ವಿದ್ಯುತ್ ಬಳಕೆಯಂತಹ ತಾಂತ್ರಿಕ ಆವಿಷ್ಕಾರಗಳ ಮೂಲಕ ಆಧುನಿಕತೆಗೆ ಹೊಸ ಆಯಾಮ ನೀಡಿತು. ವಿಶೇಷವಾಗಿ, ಮಹಿಳಾ ಕಲಾವಿದರ ಕೊಡುಗೆಗಳು ಈ ವಿಶ್ಲೇಷಣೆಗೆ ಸ್ತ್ರೀವಾದಿ ಚೌಕಟ್ಟನ್ನು ಒದಗಿಸಿವೆ. ಒಟ್ಟಾರೆಯಾಗಿ, ಸಂಗೀತ, ಕಾವ್ಯ ಮತ್ತು ಆಡುಭಾಷೆಯ ಸಮ್ಮಿಲನದೊಂದಿಗೆ ಮೂಡಿಬಂದ ಈ ವೃತ್ತಿರಂಗಭೂಮಿಯು ಕಲೆಯ ಮೂಲಕ ಸಮಾಜವನ್ನು ಪರಿವರ್ತಿಸುವ ಮತ್ತು ಕನ್ನಡದ ಸಾಂಸ್ಕೃತಿಕ ಚರಿತ್ರೆಯನ್ನು ಮರುನಿರ್ಮಿಸುವ ಪ್ರಮುಖ ಸೈದ್ಧಾಂತಿಕ ಹಾದಿಯಾಗಿದೆ.

**KEYWORDS:** ರಂಗಭೂಮಿ, ಕನ್ನಡ, ನಾಟಕ, ಕಂಪೆನಿ, ಕರ್ನಾಟಕ.

* **ಡಾ. ಹೇಮಲತಾ ಜಿ.ಎಂ.,** ಶ್ರೀ ಮಂಜುನಾಥ ನಿಲಯ, ಸ್ವಾಮಿ ವಿವೇಕಾನಂದ ಸರ್ಕಲ್, ಹಾರಂಗಿ ರೋಡ್, ಗುಮ್ಮನಕೊಲ್ಲಿ, ಕುಶಾಲನಗರ, ಕೊಡಗು.

**ಪೀಠಿಕೆ:**

ರಂಗಭೂಮಿ ಮಾನವನ ಸೃಜನಶೀಲತೆ, ಮನರಂಜನೆ ಮತ್ತು ಸಾಮಾಜಿಕ ಅಭಿವ್ಯಕ್ತಿಯ ಪ್ರಮುಖ ಮಾಧ್ಯಮವಾಗಿದೆ. ಕಾಲಕ್ರಮೇಣ ಇದು ಧಾರ್ಮಿಕ ಆಚರಣೆಗಳಿಂದ ವೃತ್ತಿಪರ ಕಲಾರೂಪವಾಗಿ ಬೆಳೆಯಿತು. ಭಾರತದಲ್ಲಿ ವೃತ್ತಿರಂಗಭೂಮಿಯ ಉದಯವು ಪಾಶ್ಚಾತ್ಯ ಪ್ರಭಾವ, ನಗರೀಕರಣ ಮತ್ತು ಸಾಮಾಜಿಕ ಪರಿವರ್ತನೆಗಳೊಂದಿಗೆ ನಿಕಟವಾಗಿ ಸಂಬಂಧಿಸಿದೆ. ಈ ಹಿನ್ನೆಲೆಯಲ್ಲಿಯೇ ವೃತ್ತಿರಂಗಭೂಮಿಯ ಉಗಮ ಮತ್ತು ಬೆಳವಣಿಗೆಯನ್ನು ಅರ್ಥಮಾಡಿಕೊಳ್ಳುವುದು ಅಗತ್ಯವಾಗಿದೆ.

ಪ್ರಾಚೀನ ಭಾರತದಲ್ಲಿ ಕಥಾವಸ್ತುವನ್ನಿಟ್ಟುಕೊಂಡು ನಾಟಕ ಪ್ರದರ್ಶಿಸಿ, ಅದರಿಂದಲೇ ಹಣ ಗಳಿಸಿ ಜೀವನ ನಡೆಸುವ ವೃತ್ತಿರಂಗಭೂಮಿ ಪದ್ಧತಿ ಇರಲಿಲ್ಲ. ಆದರೆ, ಪಾಶ್ಚಾತ್ಯರ ಪ್ರಭಾವ ಮತ್ತು ಮಾದರಿಗಳನ್ನು ಅನುಸರಿಸಿ ಕಲ್ಕತ್ತಾ ಹಾಗೂ ಮುಂಬೈನಂತಹ ನಗರಗಳ ಮೂಲಕ ಈ 'ವೃತ್ತಿರಂಗಭೂಮಿ'ಯು ಭಾರತಕ್ಕೆ ಪರಿಚಯವಾಯಿತು. ಆರಂಭದಲ್ಲಿ ರಾಜರು, ಮಹಾರಾಜರು ಮತ್ತು ಜಮೀನ್ದಾರರ ಆಶ್ರಯದಲ್ಲಿದ್ದ ಈ ರಂಗಭೂಮಿ, ಕಾಲಕ್ರಮೇಣ ಮೇಲ್ವರ್ಗದವರಿಂದ ಮುಕ್ತವಾಗಿ ನಗರ ಹಾಗೂ ಗ್ರಾಮೀಣ ಭಾಗದ ಮಧ್ಯಮ ವರ್ಗದ ಜನರ ಆಧಾರದೊಂದಿಗೆ ಸ್ವತಂತ್ರವಾಗಿ ಬೆಳೆಯಿತು. ಜಾಗತಿಕವಾಗಿ ನೋಡುವುದಾದರೆ, ಯುರೋಪಿನಲ್ಲಿ 15ನೇ ಶತಮಾನದ ವೇಳೆಗಾಗಲೇ ಅಭಿನಯವನ್ನು ವೃತ್ತಿಯಾಗಿಸುವ ಮನೋಭಾವ ಬೆಳೆದಿತ್ತು. ಹದಿನೇಳನೆಯ ಶತಮಾನದ ಹೊತ್ತಿಗೆ ಇಂಗ್ಲೆಂಡಿನಲ್ಲಿ ಪರಸ್ಪರ ಸ್ಪರ್ಧೆ-ಪ್ರತಿಸ್ಪರ್ಧೆಗಳಲ್ಲಿ ತೊಡಗಿದ್ದ ಅನೇಕ ನಾಟಕ ಮಂಡಳಿಗಳಿಂದ ಮುಕ್ತವಾದ ವೃತ್ತಿ ರಂಗಭೂಮಿಯು ಅತ್ಯಂತ ಪ್ರಭಾವಶಾಲಿಯಾಗಿ ಬೆಳೆದು ನಿಂತಿತ್ತು. ಅದಕ್ಕೂ ಮುನ್ನ, ಸ್ಪೇನಿನ ವೃತ್ತಿ ನೃತ್ಯ ಮಂಡಳಿಗಳು ಫ್ರಾನ್ಸಿನ ಕಲಾ ಕೇಂದ್ರವಾದ ಪ್ಯಾರಿಸ್ಸಿನಲ್ಲಿ ಅನೇಕ ಪ್ರದರ್ಶನಗಳನ್ನು ನೀಡಿದ್ದವು ಹಾಗೂ ಹದಿನೆಂಟನೆಯ ಶತಮಾನದ ಮೊದಲ ಭಾಗದಲ್ಲಿ ಫ್ರಾನ್ಸಿನ ವೃತ್ತಿ ರಂಗಮಂಡಳಿಗಳು 'ಬ್ಯಾಲೆ' ನೃತ್ಯ ರೂಪಕಗಳನ್ನು ಆಡುತ್ತಾ ಇಂಗ್ಲೆಂಡಿನಲ್ಲಿ ಪ್ರವಾಸ ಮಾಡಿದ್ದವು. ಇತ್ತ ಏಷ್ಯಾದ ಜಪಾನಿನಲ್ಲಿಯೂ ಸಹ 1624ರಷ್ಟು ಮುಂಚಿತವಾಗಿಯೇ 'ಎಡ್ಡೋ' ಎಂಬಲ್ಲಿನ ವೃತ್ತಿ ನಾಟಕ ರಂಗವು ಜಗತ್ಪ್ರಸಿದ್ಧವಾಗಿತ್ತು. ಭಾರತದಲ್ಲಿ ಕ್ರಿಶ್ಚಿಯನ್ ಮಿಷನರಿಗಳು ಧರ್ಮ ಪ್ರಚಾರಕ್ಕಾಗಿ ಚರ್ಚ್‌ಗಳ ಮೂಲಕ ರಂಗಭೂಮಿಯನ್ನು ಬಳಸಿಕೊಂಡರೂ, ಅದಲ್ಲಿದ್ದ ಮನರಂಜನೆಯ ಅಂಶಗಳು ಇಲ್ಲಿನ ವೃತ್ತಿರಂಗಭೂಮಿಗೆ ಭದ್ರ ಬುನಾದಿ ಹಾಕಿದವು. ಭಾರತದಲ್ಲಿ ಬ್ರಿಟಿಷರ ಆಡಳಿತಾವಧಿಯಲ್ಲಿ, ವಿಶೇಷವಾಗಿ ವಾರನ್ ಹೇಸ್ಟಿಂಗ್ಸ್, ವಿಲಿಯಂ ಬೆಂಟಿಂಕ್ ಮತ್ತು ಮೆಕಾಲೆಯವರ ಶಿಕ್ಷಣ ನೀತಿಗಳಿಂದಾಗಿ ದೇಶದ ರಾಜಕೀಯ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ರಂಗಗಳಲ್ಲಿ ಮಹತ್ತರ ಬದಲಾವಣೆಗಳಾದವು. ವಿಲಿಯಂ ಜೋನ್ಸ್, ಕೋಲ್‌ಬ್ರುಕ್, ಗಿಬ್ಬನ್ ಮತ್ತು ಮ್ಯಾಕ್ಸ್ ಮುಲ್ಲರ್ ಮುಂತಾದ ತಜ್ಞರಿಂದ ಒರಿಯಂಟಲ್ ಅಧ್ಯಯನಗಳು ನಡೆದು, ನಮ್ಮ ಹಿಂದೂ ಸಂಸ್ಕೃತಿಯನ್ನು ಹೊಸ ದೃಷ್ಟಿಕೋನದಿಂದ ವ್ಯಾಖ್ಯಾನಿಸಿಕೊಳ್ಳಲು ಅವು ಪ್ರೇರಣೆ ನೀಡಿದವು. ವಿಲಿಯಂ ಬೆಂಟಿಂಕ್ ಮತ್ತು ಮೆಕಾಲೆಯವರ ಶಿಕ್ಷಣ ನೀತಿಗಳಿಂದ ಹಾಗೂ ಕ್ರಿಶ್ಚಿಯನ್ ಮಿಷನರಿಗಳ ಮೂಲಕ ಆಡಳಿತ ಹಾಗೂ ಉನ್ನತ ಶಿಕ್ಷಣದಲ್ಲಿ ಇಂಗ್ಲೀಷ್ ಭಾಷೆ ಮತ್ತು ಸಾಹಿತ್ಯದ ಪ್ರಭಾವ ಹೆಚ್ಚಾಯಿತು. ಇದು ಭಾರತದಲ್ಲಿ ರಾಜಾರಾಮ್ ಮೋಹನ್ ರಾಯ್, ಸ್ವಾಮಿ ವಿವೇಕಾನಂದ ಮತ್ತು ಬಂಕಿಮ ಚಂದ್ರ ಚಟರ್ಜಿಯಂತಹ ಮಹಾನ್ ಚಿಂತಕರ ಉದಯಕ್ಕೆ ಕಾರಣವಾಯಿತು. ಇದೇ ಅವಧಿಯಲ್ಲಿ ಬ್ರಿಟಿಷರು ಕಲ್ಕತ್ತಾದಲ್ಲಿ ಕೇವಲ ತಮ್ಮ ಮನರಂಜನೆಗಾಗಿ ಇಂಗ್ಲೀಷ್ ನಾಟಕಗಳನ್ನು ಆಡಲು ಆರಂಭಿಸಿದರು. ಈ ನಿಟ್ಟಿನಲ್ಲಿ ಕಲ್ಕತ್ತಾದ

ಲಾಲ್ ಬಜಾರ್ ಬೀದಿಯಲ್ಲಿದ್ದ 'ದಿ ಪ್ಲೇ ಹೌಸ್' ಭಾರತದ ಪ್ರಥಮ ಇಂಗ್ಲಿಷ್ ರಂಗಮಂದಿರವೆಂದು ಪರಿಗಣಿತವಾಗಿದೆ. ಇದರ ಬಗ್ಗೆ ಸಂಶೋಧಕರಾದ ಎಚ್.ಎನ್. ದಾಸ್‌ಗುಪ್ತ ಅವರು "The earliest theatre in Calcutta was the play–house in Lalba–zar Street standing at the north–East corner of the mission Row...we possess no detailed account of this early English Theatre, nor as to what plays were performed there, as there was no Gazette, no newspaper at that time. It was very likely that Messrs. Drake and Holwell took some active interest in it as it appears that the house though built by voluntary subscriptions was patronized by the company. The rest, however, is lost in the hoary mist of the past."[1] ಎಂದು ಅಭಿಪ್ರಾಯಿಸಿದ್ದಾರೆ.

ಪಾಶ್ಚಾತ್ಯರ ಆಗಮನವು ಭಾರತೀಯ ರಂಗಭೂಮಿಗೆ ಹೊಸ ರೂಪವನ್ನು ನೀಡಿತು. 1795 ರಲ್ಲಿ ಕಲ್ಕತ್ತಾ ಥಿಯೇಟರ್‌ನಲ್ಲಿ ನಡೆದ ಪ್ರಯೋಗಗಳೇ ಇದಕ್ಕೆ ಮುಖ್ಯ ಪ್ರೇರಣೆ. ಆರಂಭದಲ್ಲಿ ಅಲ್ಲಿ ಷೇಕ್ಸ್‌ಪಿಯರ್‌ನ ಇಂಗ್ಲೀಷ್ ನಾಟಕಗಳನ್ನು ಪ್ರದರ್ಶಿಸಲಾಗುತ್ತಿತ್ತು. ಆದರೆ, ಇವು ಸ್ಥಳೀಯ ಜನರಿಗೆ ಅರ್ಥವಾಗುತ್ತಿಲ್ಲ ಎಂಬುದನ್ನು ಮನಗಂಡ ರಷ್ಯನ್ ಸಾಹಿತಿ ಹೆರಾಸಿಮ್ ಲಿಬೆಡೆಫ್ ಅವರು 'ದಿ ಡಿಸ್‌ಗೈಸ್' ಮತ್ತು 'ಲವ್ ಇಸ್ ದಿ ಬೆಸ್ಟ್ ಡಾಕ್ಟರ್' ಎಂಬ ನಾಟಕಗಳನ್ನು ಬಂಗಾಳಿ ಭಾಷೆಗೆ ಅನುವಾದಿಸಿ, 1795 ರಲ್ಲಿ ಯಶಸ್ವಿಯಾಗಿ ಪ್ರಯೋಗಿಸಿದರು. ಇದು ಮುಂದಿನ ನಾಟಕಕಾರರಲ್ಲಿ ಪ್ರಾದೇಶಿಕ ಭಾಷೆಗಳ ಬಗ್ಗೆ ಒಲವು ಮೂಡಲು ಕಾರಣವಾಯಿತು. ಪಾಶ್ಚಾತ್ಯರ ಪ್ರಭಾವಕ್ಕೆ ಮುನ್ನ ಭಾರತದಲ್ಲಿ ಪೌರಾಣಿಕ ಹಾಗೂ ಜಾನಪದ ಕಥೆಗಳನ್ನೊಳಗೊಂಡ ಆಸ್ಥಾನ ನಾಟಕಗಳು ಮತ್ತು ಬಯಲಾಟಗಳು ಮಾತ್ರ ಅಸ್ತಿತ್ವದಲ್ಲಿದ್ದವು. ಆದರೆ ಪಾಶ್ಚಾತ್ಯರ ಪರಿಚಯದಿಂದಾಗಿ ಭಾರತೀಯ ರಂಗಭೂಮಿಗೆ ಚಿತ್ರ ಚೌಕಟ್ಟಿನ ರಂಗಮಂದಿರ (ಪ್ರೊಸೀನಿಯಂ), ರಂಗಸಜ್ಜಿಕೆ ಹಾಗೂ ಟಿಕೆಟ್ ಖರೀದಿಸಿ ನಾಟಕ ನೋಡುವ ಮೂರು ಹೊಸ ಪದ್ಧತಿಗಳು ರೂಢಿಗೆ ಬಂದವು. ವಿಶೇಷವೆಂದರೆ, ಪ್ರಾದೇಶಿಕ ರಂಗಭೂಮಿಗಳು ಈ ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಂಡಾಗಲೂ ತಮ್ಮ ಮೂಲ ಜಾನಪದ ಸೊಗಡನ್ನು ಉಳಿಸಿಕೊಂಡವು. ಭಾರತೀಯ ವೃತ್ತಿ ರಂಗಭೂಮಿಯ ಉಗಮವು 1775–76ರ ಅವಧಿಯಲ್ಲಿ ಕಲ್ಕತ್ತೆಯಲ್ಲಿ ಆಂಗ್ಲ ನಾಟಕಗಳ ಪ್ರಭಾವದಿಂದ ಆರಂಭವಾಯಿತು. ಅಲ್ಲಿನ ಶ್ರೀಮಂತ ಜಮೀನ್ದಾರರ ವಂತಿಗೆಯಿಂದ ರಂಗಮಂದಿರವೊಂದು ನಿರ್ಮಾಣವಾದ ನಂತರ ವೃತ್ತಿ ನಾಟಕ ರಂಗಕ್ಕೆ ಅಧಿಕೃತ ಬುನಾದಿ ದೊರೆಯಿತು. ಇದರ ಪ್ರೇರಣೆಯಿಂದ 1835ರಲ್ಲಿ 'ವಿದ್ಯಾಸುಂದರ' ಎಂಬ ನಾಟಕ ಮೊದಲ ಬಾರಿಗೆ ಪ್ರದರ್ಶನಗೊಂಡಿತು. ಆರಂಭದಲ್ಲಿ ಇದು ಕೇವಲ ಮೇಲ್ವರ್ಗಕ್ಕೆ ಸೀಮಿತವಾಗಿದ್ದರೂ, 1872ರಲ್ಲಿ ಸ್ಥಾಪನೆಯಾದ 'ರಾಷ್ಟ್ರೀಯ ನಾಟಕ ರಂಗ'ವು ಎಲ್ಲ ವರ್ಗದವರಿಗೂ ಮುಕ್ತ ಅವಕಾಶ ಕಲ್ಪಿಸಿತು. ಇದು ನಟರಿಗೆ ಸಂಬಳ ಹಾಗೂ ಪ್ರೇಕ್ಷಕರಿಗೆ ಟಿಕೆಟ್ ವ್ಯವಸ್ಥೆಯನ್ನು ತರುವ ಮೂಲಕ ರಂಗಭೂಮಿಗೆ ವಾಣಿಜ್ಯ ಆಯಾಮವನ್ನು ನೀಡಿತು. ಪಾಶ್ಚಾತ್ಯ ಶಿಕ್ಷಣಕ್ಕೆ ಮೊದಲೇ ತೆರೆದುಕೊಂಡಿದ್ದ ಪಾರ್ಸಿ ಜನಾಂಗವು ಈ ವ್ಯಾಪಾರಿ ಮನೋಭಾವದ ರಂಗಭೂಮಿಯನ್ನು ಮುನ್ನಡೆಸಿತು. 1882ರಲ್ಲಿ ಜಗನ್ನಾಥ ಶಂಕರಶೇಟ್ ಅವರು ಮುಂಬೈನಲ್ಲಿ ಸ್ವಂತ ರಂಗಮಂದಿರವನ್ನು ಕಟ್ಟಿಸಿದ ನಂತರ ಪಾರ್ಸಿ ಮತ್ತು ಮರಾಠಿ ರಂಗಭೂಮಿಗೆ ಹೊಸ ಚಾಲನೆ ದೊರೆಯಿತು. ಮರಾಠಿ ಆಧುನಿಕ ರಂಗಭೂಮಿಯ ಪಿತಾಮಹ ವಿಷ್ಣುದಾಸ್ ಭಾವೆ ಇದೇ ರಂಗಮಂದಿರದಲ್ಲಿ ತಮ್ಮ ಆರಂಭಿಕ ಪ್ರದರ್ಶನಗಳನ್ನು ನೀಡಿದರು. 'ಪಾರ್ಸಿ ಅಮೆಚೂರ್ ಕಂಪೆನಿ'ಯಿಂದ ಆರಂಭವಾದ ಈ

ಪಯಣ, ಮುಂದೆ 'ಓರಿಯಂಟಲ್ ಕಂಪೆನಿ', 'ವಿಕ್ಟೋರಿಯಾ ಕಂಪೆನಿ' ಸೇರಿದಂತೆ ಹಲವು ವೃತ್ತಿ ಸಂಸ್ಥೆಗಳ ಹುಟ್ಟಿಗೆ ಕಾರಣವಾಯಿತು. ಈ ಲಾಭದಾಯಕ ಉದ್ದೇಶ ಹಾಗೂ ಟಿಕೆಟ್ ಪದ್ಧತಿಯು ನಾಟಕ ರಂಗವನ್ನು ಹವ್ಯಾಸಿ ತಂಡಗಳಿಂದ ವೃತ್ತಿಪರ ಮಂಡಳಿಗಳಾಗಿ ಪರಿವರ್ತಿಸಿತು. ಇದೇ ವೇಳೆ, ಮರಾಠಿ ಆಧುನಿಕ ರಂಗಭೂಮಿಯ ಉದಯಕ್ಕೆ ಕರ್ನಾಟಕದ ಜಾನಪದ ಕಲೆಯಾದ ಯಕ್ಷಗಾನವು ಪ್ರೇರಣೆಯಾಗಿದ್ದು ಕನ್ನಡ ರಂಗಭೂಮಿಯ ಇತಿಹಾಸದಲ್ಲಿ ಹೆಮ್ಮೆಯ ಸಂಗತಿಯಾಗಿದೆ.

1846ರಲ್ಲಿ "ಕನ್ನಡ ಕರಾವಳಿಯ ಭಾಗವತರಾಟಗಳನ್ನು ನೋಡಿ ಸ್ಫೂರ್ತಿಗೊಂಡು ಸಾಂಗ್ಲಿ ಸಂಸ್ಥಾನದ ಆಶ್ರಯದಲ್ಲಿದ್ದ ಚತುರ ಕರಣಿಕನಾದ ವಿಷ್ಣುಪಂಥ ಭಾವೆ ಎಂಬಾತ ಕನ್ನಡ ಯಕ್ಷಗಾನದ ನಡೆಯಲ್ಲಿ ಮರಾಠಿ ನಾಟಕಗಳನ್ನು ರಚಿಸಿ ಆಡಲು ತೊಡಗಿದರು."[2] ಇವರು ಸ್ಥಾಪಿಸಿದ 'ಸಾಂಗ್ಲಿಕರ್ ಸಂಗೀತ ನಾಟಕ ಮಂಡಳಿ'ಯು ರಂಗಸಜ್ಜಿಕೆ, ಪರದೆ ಹಾಗೂ ಬದಲಾಗುವ ದೃಶ್ಯಗಳಿಗೆ ಹೆಚ್ಚಿನ ಒತ್ತು ನೀಡಿತು. 1861 ರಲ್ಲಿಯೇ ಮೊಟ್ಟಮೊದಲ ಮರಾಠಿ ನಾಟಕ 'ತೊರಲೆ ಮಾಧವರಾವ್ ಪೇಶ್ವೆ' ಎಂಬ ಐತಿಹಾಸಿಕ ನಾಟಕ ವಿನಾಯಕ ಜನಾರ್ಧನ ಕೀರ್ತನೆ ಎಂಬಾತನಿಂದ ರಚಿಸಲ್ಪಟ್ಟಿತು. ಇದೇ ಪ್ರಥಮ ಮರಾಠಿ ಮುದ್ರಿತ ಸ್ವತಂತ್ರ ನಾಟಕವೆನ್ನಬಹುದು. ಪೌರಾಣಿಕ ನಾಟಕಗಳಿಗಿಂತ ಭಿನ್ನವಾದ ಐತಿಹಾಸಿಕ ವಸ್ತುವೊಂದನ್ನು ಆಯ್ದುಕೊಂಡಿದ್ದರಿಂದ ಈ ನಾಟಕಕ್ಕೆ ಹೆಚ್ಚಿನ ಸಮಕಾಲೀನತೆಯ ಪ್ರಾಮುಖ್ಯತೆಯು ಸಿಕ್ಕಿತು. ಇಲ್ಲಿಂದ ಸ್ವತಂತ್ರ ನಾಟಕಗಳ ರಚನೆ ಮುಂದುವರೆಯಿತು. ಕರ್ನಾಟಕದ ವೃತ್ತಿರಂಗಭೂಮಿಯ ಮೇಲೆ ಪಾರ್ಸಿ ರಂಗಭೂಮಿಗಿಂತ ಮರಾಠಿ ನಾಟಕ ತಂಡಗಳ ಪ್ರಭಾವವೇ ಹೆಚ್ಚಾಗಿತ್ತು. ಮಹಾರಾಷ್ಟ್ರದ ತಂಡಗಳು ಉತ್ತರ ಕರ್ನಾಟಕಕ್ಕೆ ಭೇಟಿ ನೀಡಿ ಪ್ರದರ್ಶನಗಳನ್ನು ನೀಡುವ ಮೂಲಕ ಸ್ಥಳೀಯ ರಂಗಭೂಮಿಯನ್ನು ಪ್ರಭಾವಿಸಿದವು. ವೃತ್ತಿರಂಗಭೂಮಿ ಬರುವ ಮುನ್ನ ಕರ್ನಾಟಕದಲ್ಲಿ ಬಯಲು ರಂಗಭೂಮಿಯ ಸ್ವರೂಪವಿತ್ತು, ಮಾತ್ರವಲ್ಲದೆ ಕಲಾವಿದರು ಊರೂರು ಅಲೆದು ಪ್ರದರ್ಶನ ನೀಡಿ, ಜನ ನೀಡುವ ಧಾನ್ಯ-ಹಣದಿಂದಲೇ ಜೀವನ ಸಾಗಿಸುತ್ತಿದ್ದರು. ಹಳ್ಳಿಯ ಸಾಮಾನ್ಯ ಜನರಿಗೆ ಧಾರ್ಮಿಕ ಹಿನ್ನೆಲೆಯ ಜನಪದ ನಾಟಕಗಳಿದ್ದರೆ, ಧನಿಕರಿಗೆ ರಾಜಾಶ್ರಯದ ನಾಟಕಗಳಿದ್ದವು. ಆದರೆ ಇವೆರಡರ ಮಧ್ಯದಲ್ಲಿದ್ದ ಮಧ್ಯಮ ವರ್ಗದ ಪ್ರೇಕ್ಷಕರ ಮನೋರಂಜನೆಗಾಗಿ ವೃತ್ತಿರಂಗಭೂಮಿಗೆ ಜನ್ಮ ತಾಳಿತು. ಸಾಂಪ್ರದಾಯಿಕ ಜನಪದ ರಂಗಭೂಮಿಗೆ ಧಾರ್ಮಿಕ ಹಿನ್ನೆಲೆ ಕಡ್ಡಾಯವಾಗಿದ್ದರೆ, ವಾಣಿಜ್ಯ ಉದ್ದೇಶದ ವೃತ್ತಿರಂಗಭೂಮಿಯು ಪುರಾಣದ ಕಥೆಗಳನ್ನು ಕೇವಲ ಜನಪ್ರಿಯತೆ ಹಾಗೂ ಮನೋರಂಜನೆಗಾಗಿ ಬಳಸಿಕೊಂಡಿತು.

ಕನ್ನಡ ರಂಗಭೂಮಿ ಪ್ರಕಾರಗಳಲ್ಲೊಂದಾದ ವೃತ್ತಿರಂಗಭೂಮಿಯನ್ನು ಎಚ್.ಕೆ. ರಂಗನಾಥ್‌ರವರು "ನಾಟಕವನ್ನೇ ವೃತ್ತಿಯಾಗಿ ಅವಲಂಬಿಸಿ ಮಂಡಳಿಗಳನ್ನು ಕಟ್ಟಿಕೊಂಡು ನಿರ್ವಹಿಸುವ ಪ್ರದರ್ಶನ ಪ್ರಕಾರವನ್ನು 'ವೃತ್ತಿರಂಗಭೂಮಿ' ಎಂದು ಕರೆದಿದ್ದಾರೆ. ಇದು ಪ್ರಾಚೀನ ಸಂಸ್ಕೃತ ರಂಗಭೂಮಿಯಿಂದ ಬೇರೆಯಾದುದು ಹಾಗೂ ರಂಗಭೂಮಿ ವ್ಯಾಪಾರಿ ಮುಖವನ್ನು ತೋರಿಸುವಂಥದ್ದು. ಆದ್ದರಿಂದ ಇದನ್ನು 'ಕಮರ್ಷಿಯಲ್ ಥಿಯೇಟರ್' ಎಂದು, ರಂಗಪ್ರಯೋಗಗಳಲ್ಲಿ ನವೀನ ರೀತಿಗಳನ್ನು ಬಳಕೆಗೆ ತಂದ ರಂಗಭೂಮಿಯಾದುದರಿಂದ 'ಮಾಡರ್ನ್ ಥಿಯೇಟರ್' ಎಂದೂ ಕರೆಯುವುದುಂಟು"[3] ಎಂದು ವೃತ್ತಿರಂಗಭೂಮಿಯನ್ನು ವ್ಯಾಖ್ಯಾನಿಸಿದ್ದಾರೆ. ಬಂಗಾಳ, ಮಹಾರಾಷ್ಟ್ರ ಮತ್ತು ಪಾರ್ಸಿಗಳ ನಂತರ ಕರ್ನಾಟಕದಲ್ಲಿ ವೃತ್ತಿರಂಗಭೂಮಿ ಮೈದಳೆಯಿತು. ಆರಂಭದಲ್ಲಿ ಬಯಲಾಟಗಳ ಮೂಲಕ ಮನೋರಂಜನೆ ಪಡೆಯುತ್ತಿದ್ದ ಕನ್ನಡದ ಜನತೆ, ಈ ಹೊಸ

ಆಧುನಿಕ ರಂಗಭೂಮಿಯನ್ನೂ ಒಪ್ಪಿಕೊಂಡರು. ಕನ್ನಡ ವೃತ್ತಿರಂಗಭೂಮಿಯು ಪಾಶ್ಚಾತ್ಯ ಶೈಲಿಯನ್ನು ಅನುಕರಿಸಿದರೂ, ನಾಟಕದ ಆರಂಭದಲ್ಲಿ ವಿಘ್ನನಿವಾರಣೆಗೆ ಗಣೇಶನ ಪ್ರವೇಶದಂತಹ ತನ್ನ ಸಾಂಸ್ಕೃತಿಕ ಬೇರು ಹಾಗೂ ಜನಪದೀಯ ಸಂಪ್ರದಾಯಗಳನ್ನು ಕೈಬಿಡದೆ ಉಳಿಸಿಕೊಂಡು ಬಂದಿರುವುದು ಅದರ ಮುಖ್ಯ ವೈಶಿಷ್ಟ್ಯವಾಗಿದೆ. ಕನ್ನಡದ 'ದಶಾವತಾರದ ಆಟ'ದಿಂದ ಪ್ರಭಾವಿತಗೊಂಡು, ಪಾರ್ಸಿ ನಾಟಕಗಳಿಂದ ಸ್ಫೂರ್ತಿ ಪಡೆದ ಮರಾಠಿ ರಂಗಭೂಮಿ ಉತ್ತರ ಕರ್ನಾಟಕದಲ್ಲಿ ಅಪಾರ ಜನಪ್ರಿಯತೆ ಗಳಿಸಿತು. ಇವರ ಪ್ರಭಾವದಿಂದ ಇಡೀ ರಂಗಭೂಮಿ ಮರಾಠಿಮಯವಾದಾಗ, ಕನ್ನಡ ಭಾಷೆ ಮತ್ತು ಕಲೆಯ ಅಭಿಮಾನದಿಂದ ಉತ್ತರ ಕರ್ನಾಟಕದಲ್ಲಿ ಅಪ್ಪಟ ಕನ್ನಡ ವೃತ್ತಿರಂಗಭೂಮಿಯ ಉಗಮವಾಯಿತು. ಇದರ ಮುಖ್ಯ ನೇತಾರರು ಶಾಂತಕವಿಗಳು. ದ. ರಾ. ಬೇಂದ್ರೆಯವರ ಅಭಿಪ್ರಾಯದಂತೆ, "ಬಂಡಾಯವೆಂದು ಕರೆಯಲ್ಪಡುವ ಸ್ವಾತಂತ್ರ್ಯ ಯುದ್ಧವೆಂಬ ನೇಗಿಲಿನಿಂದ ಭಾರತ ಭಾಗ್ಯವಿಧಾತನು ಹಿಂದುಸ್ತಾನದ ಕ್ಷೇತ್ರ ಶುದ್ಧಿಯನ್ನು ನಡೆಸಿದನು. ಇಂಥ ಸಂಧಿಕಾಲಕ್ಕೆ 15ನೇ ಜನವರಿ 1856ರ ಪಿಂಗಳನಾಮ ಸಂವತ್ಸರದಲ್ಲಿ ಶಾಂತಕವಿಗಳು ಕರ್ನಾಟಕದಲ್ಲಿ ಜನ್ಮವೆತ್ತಿದ್ದರು. ಅಲ್ಲಿಂದ ಮುಂದೆ ಹತ್ತು ಹದಿನೈದು ವರ್ಷಗಳೊಳಗಾಗಿಯೇ ಭಾರತಕ್ಕೆ ಭೂಷಣವನ್ನು ತಂದಿರುವ ಎಲ್ಲ ಮಹಾತ್ಮರು ಬೇರೆ ಬೇರೆ ಪ್ರಾಂತಗಳಲ್ಲಿ ಅವತರಿಸಿರುವರು."[4] ಕನ್ನಡ ನಾಟಕದ ಪ್ರಥಮ ಗುರು ಎಂದು ಪ್ರಸಿದ್ಧರಾದ ಶಾಂತಕವಿಗಳ ಮೂಲ ಹೆಸರು ಸಕ್ಕರಿ ಬಾಳಾಚಾರ್ಯ. ವೃತ್ತಿಯಿಂದ ಶಾಲಾ ಶಿಕ್ಷಕರಾಗಿದ್ದ ಇವರಿಗೆ ಶಾಸ್ತ್ರೀಯ ಮತ್ತು ಜನಪದ ರಂಗಪ್ರಕಾರಗಳ ಆಳವಾದ ಜ್ಞಾನವಿತ್ತು. 1870ರ ದಶಕದಲ್ಲಿ ಧಾರವಾಡದ ಸುತ್ತಮುತ್ತಲ ಪ್ರಾಂತಗಳಲ್ಲಿ ಕನ್ನಡ ಭಾಷೆ ಹಾಗೂ ನಾಟಕಗಳಿಗೆ ಸೂಕ್ತ ಪ್ರೋತ್ಸಾಹವಿರಲಿಲ್ಲ. ಈ ನಿರಾಶಾದಾಯಕ ಸ್ಥಿತಿಯನ್ನು ಬದಲಾಯಿಸಿ, ಅಂದು ಅತಿಯಾಗಿದ್ದ ಮರಾಠಿ ನಾಟಕಗಳ ಪ್ರಭಾವವನ್ನು ಮೆಟ್ಟಿ ನಿಲ್ಲಲು ಶಾಂತಕವಿಗಳು 1877ರಲ್ಲಿ ಗದುಗಿನಲ್ಲಿ 'ಶ್ರೀ ವೀರನಾರಾಯಣ ಪ್ರಸಾದಿತ ಕೃತಪುರ ನಾಟಕ ಮಂಡಳಿ'ಯನ್ನು ಆರಂಭಿಸಿದರು. ಕನ್ನಡಾಭಿಮಾನವನ್ನು ಜಾಗೃತಗೊಳಿಸುವ ಉದಾತ್ತ ಧ್ಯೇಯ ಹೊಂದಿದ್ದ ಈ ಸಂಸ್ಥೆಯು 'ಉಷಾಹರಣ' ಮತ್ತು 'ಕೀಚಕವಧೆ'ಯಂತಹ ನಾಟಕಗಳನ್ನು ಪ್ರದರ್ಶಿಸಿತು. ಇದು ಯಕ್ಷಗಾನ ಹಾಗೂ ಭಾಗವತರ ಸಾಂಪ್ರದಾಯಿಕ ಶೈಲಿಯಲ್ಲಿದ್ದು, ಕಲಾವಿದರು ಹವ್ಯಾಸಿಗಳಾಗಿದ್ದರು. ಈ ಮಂಡಳಿಗೆ ವೃತ್ತಿರಂಗಭೂಮಿಯ ಪೂರ್ಣ ಸ್ವರೂಪವಿರಲಿಲ್ಲ, ಯಾವುದೇ ನಿಶ್ಚಿತ ರಂಗಮಂದಿರವಿಲ್ಲದೆ, ಡೇರೆಗಳನ್ನು ಹಾಕಿ ಟಿಕೆಟ್ ರಹಿತವಾಗಿ ನಾಟಕಗಳನ್ನು ಆಡಲಾಗುತ್ತಿತ್ತು. ಆದಾಗ್ಯೂ, ಈ ಪ್ರಯೋಗಗಳು ಕನ್ನಡದ ವೃತ್ತಿರಂಗಭೂಮಿಗೆ ಗಟ್ಟಿ ಬುನಾದಿ ಹಾಕಿದವು. ಇವರ ಪ್ರೇರಣೆಯಿಂದ ಮುಂದೆ 'ಹಲಸಗಿ ಮಂಡಳಿ' ಸೇರಿದಂತೆ ಹಲವು ರಂಗಸಂಸ್ಥೆಗಳು ಹುಟ್ಟಿಕೊಂಡವು. ಇದೇ ಅವಧಿಯಲ್ಲಿದ್ದ 'ತಂತುಪುರಸ್ತ ನಾಟಕ ಮಂಡಳಿ'ಯು ಸಾರಿಗೆ ಸೌಲಭ್ಯಗಳ ಕೊರತೆಯಿದ್ದ ಆ ದಿನಗಳಲ್ಲೇ ಹೊರರಾಜ್ಯಗಳಿಗೂ ಪ್ರವಾಸ ಕೈಗೊಂಡು, ಆಯಾ ಪ್ರಾದೇಶಿಕ ಭಾಷೆಗಳಲ್ಲೇ ನಾಟಕಗಳನ್ನು ಪ್ರದರ್ಶಿಸುವ ಮೂಲಕ ವಿಶಿಷ್ಟ ಸಾಂಸ್ಕೃತಿಕ ಹಾಗೂ ಭಾಷಿಕ ಸಾಮರಸ್ಯವನ್ನು ಮೆರೆಯಿತು.

ಸಾಮಾನ್ಯವಾಗಿ 1900–1940 ರವರೆಗಿನ ಕಾಲಘಟ್ಟವನ್ನು ಕರ್ನಾಟಕ ವೃತ್ತಿರಂಗಭೂಮಿಯ ಸುವರ್ಣಯುಗವೆಂದು ಪರಿಗಣಿಸಲಾಗುತ್ತದೆ. ಮರಾಠಿ ಮತ್ತು ಪಾರ್ಸಿ ನಾಟಕಗಳ ಅಬ್ಬರದ ನಡುವೆ ಕನ್ನಡಿಗರಲ್ಲಿ ಭಾಷಿಕ ಜಾಗೃತಿ ಮೂಡಿಸಲು ಶಾಂತಕವಿಗಳು ಸ್ಥಾಪಿಸಿದ ನಾಟಕ ಮಂಡಳಿಯು ಇಡೀ ರಂಗಭೂಮಿಯ ವಿಕಾಸಕ್ಕೆ ಪ್ರೇರಣೆಯಾಯಿತು. ಇದರ ಪ್ರಭಾವದಿಂದ ಉತ್ತರ ಕರ್ನಾಟಕದಲ್ಲಿ ಸ್ವತಂತ್ರ ಕಂಪೆನಿಗಳು

ತಲೆ ಎತ್ತಿದರೆ, ದಕ್ಷಿಣ ಕರ್ನಾಟಕದಲ್ಲಿ ರಾಜಾಶ್ರಯದ ಬೆಂಬಲದೊಂದಿಗೆ ರಂಗಸಂಸ್ಥೆಗಳು ಉದಯಿಸಿದವು. ಉತ್ತರ ಕರ್ನಾಟಕದಲ್ಲಿ ಶಿವಮೂರ್ತಿಸ್ವಾಮಿ ಕಣಬರ್ಗಿಮಠ ಅವರ 'ಕಾಡಸಿದ್ದೇಶ್ವರ ಸಂಗೀತ ನಾಟಕ ಮಂಡಳಿ'ಯು (ಕೊಣ್ಣೂರು ಕಂಪೆನಿ) ಆಕರ್ಷಕ ರಂಗಸಜ್ಜಿಕೆ, ವಿದ್ಯುತ್ ಡೈನಮೋ, ತಿರುಗು ಮಂಚ (ರೊಟೇಟಿಂಗ್ ಸ್ಟೇಜ್) ಹಾಗೂ ಮಹಿಳೆಯರಿಗೆ ನಟನೆಯಲ್ಲಿ ಅವಕಾಶ ನೀಡುವ ಮೂಲಕ ರಂಗಭೂಮಿಗೆ ಪೂರ್ಣ ವೃತ್ತಿಪರ ಮತ್ತು ತಾಂತ್ರಿಕ ವೈಭವವನ್ನು ತಂದುಕೊಟ್ಟಿತು. ಆನಂತರ ಬಂದ ಶಿರಹಟ್ಟಿ ವೆಂಕೋಬರಾಯರ ಕಂಪೆನಿಯು ಅಭಿನಯ ಮತ್ತು ಸಂಗೀತಕ್ಕೆ ಪ್ರಾಧಾನ್ಯತೆ ನೀಡಿತು. ಕಾಲಕ್ರಮೇಣ ಹಲಗೇರಿ ಮತ್ತು ಹೊಸಮನಿಯವರ ಕಂಪೆನಿಗಳು ಸಾಮಾಜಿಕ ನಾಟಕಗಳಿಗೂ, ವಾಮನರಾವ್ ಮಾಸ್ಟರ್ ಅವರ ಮಂಡಳಿಯು ಮರಾಠಿಯಿಂದ ಅನುವಾದಗೊಂಡ ಸಂಗೀತ ಪ್ರಧಾನ ನಾಟಕಗಳಿಗೂ ಒತ್ತು ನೀಡಿದವು. ಇದಕ್ಕೆ ಭಿನ್ನವಾಗಿ ಗರುಡ ಸದಾಶಿವರಾಯರ ಸಂಸ್ಥೆಯು ಗದ್ಯ ಮತ್ತು ನೈಜ ಅಭಿನಯಕ್ಕೆ ಮನ್ನಣೆ ನೀಡಿತು. ಚಿಂದೋಡಿ ವೀರಪ್ಪ, ಹಕ್ಕುಂಡಿ ಈರಪ್ಪ, ಹಂದಿಗನೂರು ಸಿದ್ರಾಮಪ್ಪ ಹಾಗೂ ಏಣಗಿ ಬಾಳಪ್ಪನವರ ನಾಟ್ಯಸಂಘಗಳು ರಂಗಭೂಮಿಯನ್ನು ಮತ್ತಷ್ಟು ಸಮೃದ್ಧಗೊಳಿಸಿದವು. ಮುಖ್ಯವಾಗಿ ಪುರುಷ ಪ್ರಧಾನವಾಗಿದ್ದ ಈ ರಂಗಭೂಮಿಯಲ್ಲಿ ಲಕ್ಷ್ಮೇಶ್ವರದ ಬಚ್ಚಾಸಾನಿ, ಮಳವಳ್ಳಿ ಸುಂದರಮ್ಮ ಹಾಗೂ ಗಂಗೂಬಾಯಿ ಗುಳೇದಗುಡ್ಡ ಅವರ ನೇತೃತ್ವದ ಮಹಿಳಾ ನಾಟಕ ಮಂಡಳಿಗಳು ಅಪೂರ್ವ ಸಾಧನೆ ಮಾಡಿ ಇತಿಹಾಸ ನಿರ್ಮಿಸಿದವು. ಇದೇ ಅವಧಿಯಲ್ಲಿ ಉತ್ತರ ಕರ್ನಾಟಕದ ಸ್ಥಳೀಯ ಕಂಪೆನಿಗಳ ತೀವ್ರ ಸ್ಪರ್ಧೆಯನ್ನು ಎದುರಿಸಲಾರದೆ ಮರಾಠಿ ಮತ್ತು ಪಾರ್ಸಿ ಕಂಪೆನಿಗಳು ದಕ್ಷಿಣ ಕರ್ನಾಟಕದತ್ತ ವಲಸೆ ಹೋದವು. ಮೈಸೂರು ಮಹಾರಾಜರ ರಾಜಾಶ್ರಯದಿಂದಾಗಿ ಅಲ್ಲಿ 'ಶ್ರೀ ಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾ' ಸೇರಿದಂತೆ ಪ್ರಮುಖ ಕಂಪೆನಿಗಳು ಉದಯಿಸಿದವು. ಎಂ. ವಿ. ವರದಾಚಾರ್ಯರ 'ರತ್ನಾವಳಿ ಥಿಯೇಟ್ರಿಕಲ್ ಕಂಪೆನಿ'ಯು ಸಂಸ್ಕೃತ ಹಾಗೂ ಷೇಕ್ಸ್‌ಪಿಯರ್‌ನ ನಾಟಕಗಳನ್ನು ಪರಿಚಯಿಸಿದ್ದಲ್ಲದೆ, ನೈಜ ವೇಷಭೂಷಣ ಮತ್ತು ರಂಗದ ಮುಂಭಾಗದ ವಾದ್ಯಗೋಷ್ಠಿಯಂತಹ ಸುಧಾರಣೆಗಳೊಂದಿಗೆ ವಾಸ್ತವ ಶೈಲಿಗೆ ನಾಂದಿ ಹಾಡಿತು. ದಕ್ಷಿಣ ಕರ್ನಾಟಕದ ಇತಿಹಾಸದಲ್ಲಿ ಶತಮಾನೋತ್ಸವ ಆಚರಿಸಿದ ಹೆಗ್ಗಳಿಕೆ ಗುಬ್ಬಿ ವೀರಣ್ಣನವರ 'ಗುಬ್ಬಿ ಕಂಪೆನಿ'ಯದ್ದಾಗಿದೆ. ಇದು ತನ್ನ ವಿಶಿಷ್ಟ ಹಾಸ್ಯ ಶೈಲಿ ಹಾಗೂ 'ಸದಾರಮೆ', 'ಕುರುಕ್ಷೇತ್ರ'ದಂತಹ ನಾಟಕಗಳ ಮೂಲಕ ಅಭೂತಪೂರ್ವ ಜನಪ್ರಿಯತೆ ಗಳಿಸಿತು. ಇವರೊಂದಿಗೆ ಎಂ. ರಂಗನಾಥ ಭಟ್, ಸಿ. ಬಿ. ಮಲ್ಲಪ್ಪ, ಮಹಮ್ಮದ್ ಪೀರ್, ಸುಬ್ಬಯ್ಯ ನಾಯ್ಡು ಮತ್ತು ಕೆ. ವೀರಣ್ಣಯ್ಯನವರ ಮಂಡಳಿಗಳು ಪ್ರಭಾವಶಾಲಿ ಸಂಭಾಷಣೆಗಳ ಮೂಲಕ ಸಮಾಜದ ಓರೆಕೋರೆಗಳನ್ನು ತಿದ್ದುವ ಕಾಯಕ ಮಾಡಿದವು. ಹೀಗೆ ಆರಂಭದಲ್ಲಿ ಕೇವಲ ಪೌರಾಣಿಕ ಕಥೆಗಳಿಗೆ ಸೀಮಿತವಾಗಿದ್ದ ಕನ್ನಡ ನಾಟಕಗಳು, ಕಾಲಾನಂತರದಲ್ಲಿ ಐತಿಹಾಸಿಕ ಮತ್ತು ಪ್ರಸ್ತುತ ಸಾಮಾಜಿಕ ವಿಷಯಗಳನ್ನು ಅಳವಡಿಸಿಕೊಳ್ಳುತ್ತಾ ನಾಡಿನಾದ್ಯಂತ ಅತ್ಯಂತ ಶ್ರೀಮಂತವಾಗಿ ವಿಕಸನಗೊಂಡವು.

ವಿಮರ್ಶಕ ಕೆ. ಮರುಳಸಿದ್ದಪ್ಪನವರ ಪ್ರಕಾರ, "ಸಾಹಿತ್ಯ ದೃಷ್ಟಿಯಿಂದ ಶ್ರೇಷ್ಠವೆನ್ನಬಹುದಾದ ನಾಟಕಗಳು ತೀರಾ ಅಲ್ಪ ಪ್ರಮಾಣದಲ್ಲಿರುವುದು. ಪ್ರೇಕ್ಷಕರ ಅಭಿರುಚಿಯನ್ನನುಸರಿಸಿ ನಾಟಕ ರಚನೆಯಾದ ಕಾರಣ ಪೌರಾಣಿಕ ವಸ್ತುವಿಗೆ ಆದ್ಯತೆ ದೊರೆಯಿತು. ಬಕಾವಲಿ, ಸದಾರಮೆಯಂತಹ ನಾಟಕಗಳು ಸಾಹಿತ್ಯ ದೃಷ್ಟಿಯಿಂದ ಅಥವಾ ಕಲಾದೃಷ್ಟಿಯಿಂದ ತೀರಾ ಸಾಮಾನ್ಯ ದರ್ಜೆಗೆ ಸೇರಿದ್ದರೂ ಅಲ್ಲಿದ್ದ ರಂಜನೀಯ ಅಂಶಗಳಿಂದ

ಅತ್ಯಂತ ಜನಪ್ರಿಯತೆ ಹೊಂದಿದವು."[5] ಹೀಗೆ ಮನೋರಂಜನೆಯೇ ಮುಖ್ಯ ಗುರಿಯಾಗಿದ್ದರಿಂದ ಪ್ರದರ್ಶನದ ವೈಭವಕ್ಕೆ ಹೆಚ್ಚಿನ ಒತ್ತು ದೊರೆಯಿತಾದರೂ, ಕೆಲವು ನಾಟಕಗಳು ಮಾತ್ರ ತಮ್ಮ ಸಾಹಿತ್ಯಕ ಸತ್ವವನ್ನು ಕಳೆದುಕೊಳ್ಳದೆ, ಸಮಾಜದ ಲೋಪದೋಷಗಳನ್ನು ತಿದ್ದುವ ಪ್ರಬಲ ಶಕ್ತಿಯಾಗಿ ಮೂಡಿಬಂದವು. ಕನ್ನಡ ರಂಗಭೂಮಿಯ ಈ ಸುವರ್ಣ ಯುಗದಲ್ಲಿ, ಉತ್ತರ ಕರ್ನಾಟಕದ ವಾಮನರಾವ್, ಗರುಡ ಸದಾಶಿವರಾವ್, ಕೆರೆಮನೆ ಸೀತಾರಾಮಶಾಸ್ತ್ರಿ, ಬಸವರಾಜ ಮನ್ಸೂರ್, ಬಳ್ಳಾರಿಯ ಟಿ. ರಾಘವ ಹಾಗೂ ಮೈಸೂರು ಪ್ರಾಂತ್ಯದ ಎಂ. ವಿ. ವರದಾಚಾರ್, ಮಹಮ್ಮದ್ ಪೀರ್, ಗುಬ್ಬಿ ವೀರಣ್ಣ ಮತ್ತು ಹಿರಣ್ಣಯ್ಯನವರಂತಹ ಅಸಂಖ್ಯಾತ ದಿಗ್ಗಜ ಕಲಾವಿದರು ತಮ್ಮ ವಿಶಿಷ್ಟ ರಂಗತಂತ್ರ ಹಾಗೂ ಕಲಾತ್ಮಕ ಶ್ರೀಮಂತಿಕೆಯಿಂದ ಕನ್ನಡ ರಂಗಭೂಮಿಯ ಕೀರ್ತಿಯನ್ನು ನಾಡಿನಾದ್ಯಂತ ಪಸರಿಸಿದರು.

ಹೀಗೆ ಸುಮಾರು ನಲವತ್ತು ವರ್ಷಗಳ ಕಾಲ ಅತ್ಯಂತ ವೈಭವದಿಂದ ವಿಜೃಂಭಿಸಿದ ವೃತ್ತಿ ನಾಟಕ ಕಂಪೆನಿಗಳು ತದನಂತರದ ದಿನಗಳಲ್ಲಿ ಹಂತ-ಹಂತವಾಗಿ ಅವನತಿಯತ್ತ ಸಾಗಿದವು. ಹವ್ಯಾಸಿ ರಂಗಭೂಮಿಯ ಉಗಮ, ಹಳೆಯ ರಂಗಮಂದಿರಗಳು ಚಿತ್ರಮಂದಿರಗಳಾಗಿ ಮಾರ್ಪಟ್ಟಿದ್ದರಿಂದ ನಾಟಕ ಪ್ರದರ್ಶನದ ವೆಚ್ಚ ದುಬಾರಿಯಾದದ್ದು ಮತ್ತು ಗ್ರಾಮೀಣ ಭಾಗಗಳಿಗೆ ಸಂಚಾರಿ ಚಿತ್ರಮಂದಿರಗಳ (ಟೂರಿಂಗ್ ಸಿನಿಮಾ) ಪ್ರವೇಶವಾದದ್ದು ವೃತ್ತಿರಂಗಭೂಮಿಗೆ ಭಾರಿ ಹೊಡೆತ ನೀಡಿತು. ಮನೋರಂಜನೆಗೆ ಸಿನಿಮಾದಂತಹ ಪರ್ಯಾಯ ಮಾಧ್ಯಮ ಲಭ್ಯವಾದ ಕಾರಣ ಪ್ರೇಕ್ಷಕರಲ್ಲಿ ನಾಟಕಗಳ ಮೇಲಿದ್ದ ವ್ಯಾಮೋಹ ಕಡಿಮೆಯಾಗಿ, ಬಹುತೇಕ ನಾಟಕ ಕಂಪೆನಿಗಳು ಮುಚ್ಚುವಂತಾಯಿತು. ಕನ್ನಡ ವೃತ್ತಿರಂಗಭೂಮಿಯ ಅವನತಿ ಹಾಗೂ ಅದು ಸಾಹಿತ್ಯಕವಾಗಿ ಅಲಕ್ಷ್ಯಕ್ಕೊಳಗಾಗಲು ಹಲವು ಪ್ರಮುಖ ಕಾರಣಗಳಿವೆ. ರಂಗಭೂಮಿಯ ಪ್ರಮುಖ ಆಧಾರಸ್ತಂಭಗಳಾಗಿದ್ದ ನಟ-ನಟಿಯರು ಚಲನಚಿತ್ರ ರಂಗದತ್ತ ಆಕರ್ಷಿತರಾಗಿದ್ದು ಹಾಗೂ ನಾಟಕ ಮಂಡಳಿಗಳು ಸುಶಿಕ್ಷಿತರನ್ನು ರಂಗಭೂಮಿಯ ಮುಖ್ಯವಾಹಿನಿಗೆ ತರಲು ವಿಫಲವಾದದ್ದು ದೊಡ್ಡ ಹಿನ್ನಡೆಯಾಯಿತು. ವಿಮರ್ಶಕರಾದ ಕೆ. ಮರುಳಸಿದ್ದಪ್ಪ ಅವರು ಉಲ್ಲೇಖಿಸುವಂತೆ, "ವೃತ್ತಿರಂಗಭೂಮಿಯ ಪ್ರಭುಗಳು ಉತ್ತಮ ಅಭಿರುಚಿಯ ವಿದ್ಯಾವಂತರನ್ನು ಹೆಚ್ಚು ಲಕ್ಷಿಸಲಿಲ್ಲ, ಹಾಗೆಯೇ ಸಾಮಾನ್ಯ ಜನತೆಯ ಅಭಿರುಚಿ ಸಂಸ್ಕಾರಕ್ಕೂ ತೊಡಗಲಿಲ್ಲ. ಇದರಿಂದ ವೃತ್ತಿರಂಗಭೂಮಿಗೆ ಹಾನಿಯಾಯಿತು. ಜನತೆಯ ಹಣಕ್ಕೆ ಪ್ರತಿಯಾಗಿ ಅದ್ದೂರಿ ದೃಶ್ಯ, ವೈಭವಗಳ, ಸಂಗೀತದ, ಅಭಿನಯದ ಮನೋರಂಜನೆಯನ್ನು ಒದಗಿಸಿದ ಅವರು ಇನ್ನೂ ಹೊಣೆಯರಿತು ನಡೆದಿದ್ದರೆ ತಮ್ಮ ಅವನತಿಯನ್ನು ತಡೆಯಬಹುದಿತ್ತು. ಈ ಶತಮಾನದ ಮೂರು ಮತ್ತು ನಾಲ್ಕನೇ ದಶಕಗಳಲ್ಲಿ ಕ್ರಮೇಣ ಬಲಿಯುತ್ತಿದ್ದ ಚಲನಚಿತ್ರ ಜಗತ್ತಿಗೆ ವೃತ್ತಿರಂಗಭೂಮಿಯನ್ನು ಸ್ಪರ್ಧೆಯಲ್ಲಿ ಹಿಂದೆ ಬೀಳಿಸುವುದು ಬಹು ಸುಲಭವಾಯಿತು. ಏಕೆಂದರೆ ದೃಶ್ಯ ಮತ್ತು ಸಂಗೀತದ ಭಾವಾವೇಷದ ಮನರಂಜನೆಯನ್ನು ಹಣ ಖರ್ಚು ಮಾಡಿ ಇನ್ನೂ ವೈಭವದಿಂದ ಅವರು ನಿರ್ಮಿಸತೊಡಗಿದರು. ರಂಗಭೂಮಿಯಂತೆ ಸಿನಿಮಾ ಪ್ರತಿ ಪ್ರದರ್ಶನಕ್ಕೂ ಹೊಸ ನಿರ್ಮಿತಿಯಾಗಿ ಹೆಣಗಬೇಕಿರಲಿಲ್ಲ. ತಾಂತ್ರಿಕವಾಗಿ ಚಲನಚಿತ್ರಕ್ಕಿದ್ದ ಅನುಕೂಲಗಳು ಅದರ ಸಾಧ್ಯತೆಯನ್ನು ರಂಗಭೂಮಿಗಿಂತ ನೂರುಪಟ್ಟು ಹೆಚ್ಚಿಸಿದವು. ರಂಗಭೂಮಿಯು ಸುಲಭ ಮನರಂಜನೆಯ ಬೆನ್ನು ಹತ್ತದೆ, ಶ್ರೇಷ್ಠ ನಾಟಕ ಸಾಹಿತ್ಯದ ಬೆಂಬಲದ ಮೇಲೆ ನಿಲ್ಲುವಂತೆ ಸಿದ್ಧಪಡಿಸಿಕೊಂಡಿದ್ದರೆ ಚಲನಚಿತ್ರದೊಂದಿಗೆ ಅದು ಸ್ಪರ್ಧಿಸಬೇಕಾದ ಅಗತ್ಯವೇ ಬರುತ್ತಿರಲಿಲ್ಲ."[6] ಮರುಳಸಿದ್ದಪ್ಪನವರ

ಈ ಮಾತುಗಳು ಸಾಹಿತ್ಯಕ ದೃಷ್ಟಿಕೋನದಲ್ಲಿ ಒಪ್ಪುವಂತಾದ್ದಾಗಿದ್ದರೂ, ಆರಂಭಿಕ ಕಾಲದ ವೃತ್ತಿರಂಗಭೂಮಿಯ ವಿಶಿಷ್ಟ ಪ್ರದರ್ಶನ ಶೈಲಿ ಮತ್ತು ಕೊಡುಗೆಗಳನ್ನು ಸಂಪೂರ್ಣವಾಗಿ ಅಲ್ಲಗಳೆಯಲು ಸಾಧ್ಯವಿಲ್ಲ.

ವಿದ್ವಾಂಸರಾದ ಎಚ್. ಕೆ. ರಂಗನಾಥ್ ಅವರ ಅಭಿಪ್ರಾಯದಂತೆ, "ಕೃತಪುರ ಮಂಡಳಿಯಲ್ಲಿ ಸಂಸ್ಕೃತ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಪಂಡಿತರನಿಸಿಕೊಂಡವರೇ ನಟರಾಗಿದ್ದರು. ಅವರಲ್ಲಿ ಹಲವರು ಕೀರ್ತನಕಾರರು, ಗಮಕಿಗಳು, ಕುಮಾರವ್ಯಾಸನ ಕನ್ನಡ ಭಾರತದ ನಿಷ್ಣಾತ ಪ್ರವಚನಕಾರರು. ಅದರಿಂದ ಜನ ನಟವರ್ಗವನ್ನು ಅತ್ಯಂತ ಗೌರವಗಳಿಂದ ಕಂಡಿತು."[7] ಅಂದಿನ ನಾಟಕಗಳಲ್ಲಿ ಕನ್ನಡ ಛಂದಸ್ಸು ಮತ್ತು ವ್ಯಾಕರಣ ನಿಯಮಗಳ ಶಿಸ್ತುಬದ್ಧ ಬಳಕೆಯಿರುತ್ತಿತ್ತು. 1940 ಕ್ಕಿಂತ ಹಿಂದಿನ ನಾಲ್ಕು ದಶಕಗಳಲ್ಲಿ ಹವ್ಯಾಸಿ ರಂಗಭೂಮಿ ಮತ್ತು ಚಲನಚಿತ್ರಗಳು ನೆಲೆ ಕಂಡುಕೊಳ್ಳುವ ಮುನ್ನ, ಈ ವೃತ್ತಿ ನಾಟಕ ಕಂಪೆನಿಗಳು ಸಮಾಜದಲ್ಲಿ ಅತ್ಯಂತ ಮಹತ್ವದ ಪಾತ್ರ ವಹಿಸಿದ್ದವು. ಪೌರಾಣಿಕ, ಐತಿಹಾಸಿಕ ಅಥವಾ ಸಾಮಾಜಿಕ ವಸ್ತುಗಳ ಮೂಲಕ ಸಮಾಜದ ಓರೆಕೋರೆಗಳನ್ನು ತಿದ್ದುವ ಪ್ರಾಮಾಣಿಕ ಪ್ರಯತ್ನ ಮಾಡಿದ ಇವು, ಸ್ವಾತಂತ್ರ್ಯ ಚಳುವಳಿ ಹಾಗೂ ಕರ್ನಾಟಕ ಏಕೀಕರಣದ ಸಂದರ್ಭದಲ್ಲಿ ಜನರಲ್ಲಿ ದೇಶಭಕ್ತಿ ಮತ್ತು ಭಾಷಾಭಿಮಾನದ ಜಾಗೃತಿ ಮೂಡಿಸಿದ್ದವು. ಆದರೆ ಕಾಲಕ್ರಮೇಣ ಸುಶಿಕ್ಷಿತರು ಮತ್ತು ಹವ್ಯಾಸಿ ರಂಗಭೂಮಿಯವರು ವೃತ್ತಿರಂಗಭೂಮಿಯಲ್ಲಿ ಸಾಹಿತ್ಯಕ ಅಂಶಗಳ ಕೊರತೆಯಿದೆ ಎಂದು ಭಾವಿಸಿ, ಅದನ್ನು ಕನ್ನಡ ಸಾಹಿತ್ಯ ಚರಿತ್ರೆಯಿಂದಲೇ ಹೊರಗಿಟ್ಟು ಅಲಕ್ಷಿಸಿದರು. ಹಿರಿಯ ವಿಮರ್ಶಕ ಕೀರ್ತಿನಾಥ ಕುರ್ತುಕೋಟಿ ಅವರು ಗುರುತಿಸುವಂತೆ, "1940ರ ನಂತರ ನಮಗೆ ಬೇರೆ ಚಿತ್ರಣವೇ ಕಾಣಿಸುತ್ತದೆ. ಇದೇ ಕಾಲಕ್ಕೆ ಕೈಲಾಸಂ. ಶ್ರೀರಂಗ, ಕಾರಂತರಂತಹ ಮಧ್ಯಮವರ್ಗೀಯ ನಾಟ್ಯರಂಗ ವಿರಚಿತ ಸಾಹಿತ್ಯಕ ನಾಟಕಗಳ ರಚನೆಯು ನಡೆಯಿತು. ವೃತ್ತಿರಂಗಭೂಮಿ ಮೂಲೆಗುಂಪಾಯಿತು. Social mobility (ಚಲನವಲನ) ಇಲ್ಲದ ನೌಕರದಾರಿ ವರ್ಗ ನಾಟಕಗಳನ್ನು ಕಡೆಗಣಿಸಿತು. ಹೊಸದಾಗಿ ನಿರ್ಮಾಣಗೊಳ್ಳುತ್ತಿದ್ದ ನಾಟಕಗಳಲ್ಲಿ ವೃತ್ತಿರಂಗಭೂಮಿಯ ಟೀಕೆಯೇ ಕಂಡುಬರುತ್ತದೆ"[8] ಎನ್ನುತ್ತಾರೆ. ತೀವ್ರ ವೈಭವ ಹಾಗೂ ಬಡತನ ಎರಡನ್ನೂ ಕಂಡು ಇತಿಹಾಸ ಸೃಷ್ಟಿಸಿದ ವೃತ್ತಿ ರಂಗಭೂಮಿ ಇಂದು ಆಧುನಿಕತೆಯ ಭರಾಟೆಯಲ್ಲಿ ಅಳಿವಿನ ಅಂಚಿನಲ್ಲಿದೆ. ಇದನ್ನು ಪುನಶ್ಚೇತನಗೊಳಿಸಲು ಕಲಾವಿದರಿಗೆ ಸೂಕ್ತ ತರಬೇತಿ ಮತ್ತು ಆಧುನಿಕ ತಂತ್ರಜ್ಞಾನದ ಅರಿವು ಮೂಡಿಸುವುದು, ಸರ್ಕಾರ ಹಾಗೂ ರಂಗ ಅಕಾಡೆಮಿಗಳಿಂದ ಆರ್ಥಿಕ ನೆರವು ಒದಗಿಸುವುದು ಇಂದಿನ ಅನಿವಾರ್ಯತೆಯಾಗಿದೆ. ಇದರೊಂದಿಗೆ ರಂಗಕರ್ಮಿಗಳ ಜೀವನ ಚರಿತ್ರೆಗಳ ಪ್ರಕಟಣೆ, ವ್ಯವಸ್ಥಿತ ವಿಮರ್ಶೆ ಹಾಗೂ ಮಾಧ್ಯಮಗಳ ಮೂಲಕ ವ್ಯಾಪಕ ಪ್ರಚಾರ ನೀಡಿದಾಗ ಮಾತ್ರ ಯುವ ಪ್ರೇಕ್ಷಕರನ್ನು ಆಕರ್ಷಿಸಿ ವೃತ್ತಿ ರಂಗಭೂಮಿಗೆ ಹೊಸ ಜೀವ ತುಂಬಲು ಸಾಧ್ಯವಾಗುತ್ತದೆ.

ಒಟ್ಟಾರೆಯಾಗಿ ಹೇಳುವುದಾದರೆ, ಇಪ್ಪತ್ತನೆಯ ಶತಮಾನದ ಕನ್ನಡ ವೃತ್ತಿ ರಂಗಭೂಮಿಯು ಕೇವಲ ಮನರಂಜನೆಯ ಮಾಧ್ಯಮವಾಗಿರದೆ, ಸಮಾಜದ ಸಾಂಸ್ಕೃತಿಕ, ಸಾಮಾಜಿಕ ಮತ್ತು ಭಾಷಿಕ ಚೇತನದ ಪ್ರಮುಖ ವಾಹಕವಾಗಿತ್ತು. ಜನರಲ್ಲಿ ರಾಷ್ಟ್ರೀಯತೆ, ಭಾಷಾಭಿಮಾನ, ಸಮಾನತೆ ಹಾಗೂ ಮಾನವೀಯ ಮೌಲ್ಯಗಳನ್ನು ಬಿತ್ತುವಲ್ಲಿ ಇದು ಮಹತ್ವದ ಪಾತ್ರ ವಹಿಸಿದೆ. ನಾಟಕ ಕಂಪೆನಿಗಳು, ನಾಟಕಕಾರರು, ಸಂಗೀತಗಾರರು, ತಂತ್ರಜ್ಞರು ಮತ್ತು ಕಲಾವಿದರ ಸಾಮೂಹಿಕ ಪರಿಶ್ರಮದಿಂದ ಈ ರಂಗಭೂಮಿ ಶ್ರೀಮಂತಗೊಂಡಿತು. ಆದರೆ, ಇಷ್ಟೊಂದು ಭವ್ಯ ಇತಿಹಾಸವಿರುವ ಈ ರಂಗಭೂಮಿಯ

ಸಾಧನೆಗಳು ಮತ್ತು ಕಲಾವಿದರ ಬದುಕಿನ ಕುರಿತಾದ ಸಮಗ್ರ ದಾಖಲೀಕರಣ ಹಾಗೂ ವೈಚಾರಿಕ ಅಧ್ಯಯನಗಳು ಇನ್ನೂ ಅಪೂರ್ಣವಾಗಿವೆ. ಆದ್ದರಿಂದ, ವೃತ್ತಿ ರಂಗಭೂಮಿಯ ಇತಿಹಾಸವನ್ನು ಹೊಸ ದೃಷ್ಟಿಕೋನದಿಂದ ಮರುಪರಿಶೀಲಿಸುವುದು, ಲಭ್ಯವಿರುವ ದಾಖಲೆಗಳನ್ನು ಸಂರಕ್ಷಿಸುವುದು ಹಾಗೂ ಸಂಶೋಧನಾ ಗ್ರಂಥಗಳನ್ನು ಪ್ರಕಟಿಸುವುದು ಇಂದಿನ ತುರ್ತು ಅಗತ್ಯವಾಗಿದೆ. ಈ ಸಾಂಸ್ಕೃತಿಕ ಪ್ರಯತ್ನಗಳ ಮೂಲಕವೇ ಕನ್ನಡ ವೃತ್ತಿ ರಂಗಭೂಮಿಯ ನೈಜ ಇತಿಹಾಸವನ್ನು ಮುಂದಿನ ಪೀಳಿಗೆಗೆ ತಲುಪಿಸಲು ಮತ್ತು ಅದಕ್ಕಾಗಿ ಬದುಕನ್ನು ಸವೆಸಿದ ಕಲಾಸಾಧಕರಿಗೆ ಅರ್ಥಪೂರ್ಣ ಗೌರವ ಸಲ್ಲಿಸಲು ಸಾಧ್ಯವಾಗುತ್ತದೆ.

**ಕೊನೆ ಟಿಪ್ಪಣಿಗಳು:**

1. ಸಿಂಧುವಳ್ಳಿ ಅನಂತಮೂರ್ತಿ, (1975), ರಂಗ, ಮೈಸೂರು: ಸುರಚಿ ಪ್ರಕಾಶನ, ಪು.ಸಂ. 20
2. ರಂಗನಾಥ ಎಚ್.ಕೆ., (2014), ಕರ್ನಾಟಕ ರಂಗಭೂಮಿ, ಬೆಂಗಳೂರು: ಹೇಮಂತ ಸಾಹಿತ್ಯ ಪ್ರಕಾಶನ, ಪು.ಸಂ. 118
3. ರಂಗನಾಥ ಎಚ್.ಕೆ., (1993), ವೃತ್ತಿ ರಂಗದರ್ಶನ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು, ಪು.ಸಂ. 46
4. ರಂಗನಾಥ ಎಚ್.ಕೆ., (2014), ಕರ್ನಾಟಕ ರಂಗಭೂಮಿ, ಬೆಂಗಳೂರು: ಹೇಮಂತ ಸಾಹಿತ್ಯ ಪ್ರಕಾಶನ, ಪು.ಸಂ. 117
5. ಮರುಳಸಿದ್ದಪ್ಪ ಕೆ., (2013), ಆಧುನಿಕ ಕನ್ನಡ ನಾಟಕ, ಬೆಂಗಳೂರು: ಅಂಕಿತ ಪುಸ್ತಕ, ಪು.ಸಂ. 60
6. ಅದೇ, ಪು.ಸಂ. 67
7. ರಂಗನಾಥ ಎಚ್.ಕೆ., (2014), ಕರ್ನಾಟಕ ರಂಗಭೂಮಿ, ಬೆಂಗಳೂರು: ಹೇಮಂತ ಸಾಹಿತ್ಯ ಪ್ರಕಾಶನ, ಪು.ಸಂ. 122
8. ಕೀರ್ತಿನಾಥ ಕುರ್ತುಕೋಟಿ, (1974), ಕನ್ನಡ ರಂಗಭೂಮಿ ಅಂದು–ಇಂದು, ಧಾರವಾಡ: ಕರ್ನಾಟಕ ವಿ.ವಿ, ಪು.ಸಂ. 79

**ಪರಾಮರ್ಶನ ಗ್ರಂಥಗಳು:**

1. ಚಕ್ಕರೆ ಶಿವಶಂಕರ್, (2008), ಕರ್ನಾಟಕ ಜನಪದ ರಂಗಭೂಮಿ, ಬೆಂಗಳೂರು: ಕರ್ನಾಟಕ ಜನಪದ ಪರಿಷತ್ತು.
2. ರಾಜೇಂದ್ರ ಡಿ. ಕೆ., (1980), ದಕ್ಷಿಣ ಕರ್ನಾಟಕದ ಜಾನಪದ ರಂಗಭೂಮಿ, ಮೈಸೂರು: ಪ್ರಸಾರಾಂಗ.
3. ಮುನಿಕೃಷ್ಣಪ್ಪ, (1996), ಜಾನಪದ ಅಂತರಂಗ, ಬೆಂಗಳೂರು: ಹಂದರ ಪ್ರಕಾಶನ.
4. ಶ್ರೀರಂಗ, (1983), ಕನ್ನಡ ರಂಗಭೂಮಿ ನಡೆದುಬಂದ ದಾರಿ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.
5. ಶಿವಪ್ರಕಾಶ್ ಎಚ್. ಎಸ್., (1993), ಸಾಹಿತ್ಯ ಮತ್ತು ರಂಗಭೂಮಿ, ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.